CS (Main) Exam,2021

**HXS-B-KND**

# ಕನ್ನಡ / KANNADA

## ಪತ್ರಿಕೆ II / Paper II

## (ಸಾಹಿತ್ಯ) / ( LITERATURE )

ವೇಳೆ : **ಮೂರು** ಗಂಟೆ
*Time Allowed :* ***Three*** *Hours*

ಗರಿಷ್ಠ ಅಂಕಗಳು : **250**
*Maximum Marks :* ***250***

---

### ಪ್ರಶ್ನೆ ಪತ್ರಿಕೆ ವಿಶೇಷ ಸೂಚನೆಗಳು

**ದಯವಿಟ್ಟು ಪ್ರಶ್ನೆಗಳಿಗೆ ಉತ್ತರಿಸುವ ಮೊದಲು ಕೆಳಗಿನ ಪ್ರತಿಯೊಂದು ಸೂಚನೆಗಳನ್ನು ಸರಿಯಾಗಿ ಓದಿರಿ :**

ಇದರಲ್ಲಿ **ಎಂಟು** ಪ್ರಶ್ನೆಗಳಿದ್ದು **ಎರಡು** ಭಾಗಗಳಲ್ಲಿ ವಿಂಗಡಿಸಲಾಗಿದೆ.

ಅಭ್ಯರ್ಥಿಗಳು ಎಲ್ಲಾ ಪ್ರಶ್ನೆಗಳಲ್ಲಿ **ಐದು** ಪ್ರಶ್ನೆಗಳಿಗೆ ಉತ್ತರಿಸಬೇಕು.

ಅಭ್ಯರ್ಥಿಗಳು ಪ್ರಶ್ನೆಗಳ ಸಂಖ್ಯೆ ***1*** ಮತ್ತು **5**ಕ್ಕೆ ಉತ್ತರಿಸುವುದು ಕಡ್ಡಾಯ, ಮತ್ತು ಇನ್ನುಳಿದ **ಮೂರು** ಪ್ರಶ್ನೆಗಳಲ್ಲಿ ಪ್ರತಿಯೊಂದು ವಿಭಾಗದಿಂದ ಕನಿಷ್ಠ **ಒಂದು** ಪ್ರಶ್ನೆಗಾದರೂ ಉತ್ತರಿಸಬೇಕು.

ಪ್ರತಿಯೊಂದು ಪ್ರಶ್ನೆಗಳಿಗಿರುವ ಅಂಕಗಳನ್ನು ಆಯಾ ಪ್ರಶ್ನೆಗಳ ಮುಂದೆಯೇ ನಮೂದಿಸಲಾಗಿದೆ.

ಉತ್ತರಗಳನ್ನು ಅತ್ಯಗತ್ಯವಾಗಿ **ಕನ್ನಡದಲ್ಲೇ (ಕನ್ನಡ ಲಿಪಿಯಲ್ಲೇ)** ಬರೆಯಬೇಕು.

ಕೆಲವು ಪ್ರಶ್ನೆಗಳಿಗೆ ಉತ್ತರಿಸಲು ನಿರ್ದಿಷ್ಟಪಡಿಸಿದ ಶಬ್ದಗಳ ಮಿತಿಯನ್ನು ಸರಿಯಾಗಿ ಪಾಲಿಸಬೇಕು.

ಉತ್ತರಿಸಿದ ಪ್ರಶ್ನೆಗಳನ್ನು ಕ್ರಮಬದ್ಧವಾಗಿ ಪರಿಗಣಿಸಿ ಎಣಿಕೆ ಮಾಡಲಾಗುವುದು. ಅಪೂರ್ಣ ಉತ್ತರಗಳನ್ನು ಹೊಡೆದು ಹಾಕದಿದ್ದಲ್ಲಿ ಅವುಗಳನ್ನು ಎಣಿಕೆಯಲ್ಲಿ ಪರಿಗಣಿಸಲಾಗುತ್ತದೆ. ಪ್ರಶ್ನೋತ್ತರ ಸಹಿತವಾಗಿರುವ ಪುಸ್ತಿಕೆಯಲ್ಲಿ ಬರೆಯದೆ ಉಳಿದ ಪೂರ್ಣ ಖಾಲಿ ಪುಟಗಳನ್ನು ಮತ್ತು ಭಾಗಶಃ ಖಾಲಿ ಇರುವ ಪುಟಗಳನ್ನು ಸ್ಪಷ್ಟವಾಗಿ ಹೊಡೆದು ಹಾಕಬೇಕು.

### Question Paper Specific Instructions

***Please read each of the following instructions carefully before attempting questions :***

*There are* ***EIGHT*** *questions divided in* ***TWO SECTIONS****.*

*Candidate has to attempt* ***FIVE*** *questions in all.*

*Questions no.* ***1*** *and* ***5*** *are compulsory and out of the remaining, any* ***THREE*** *are to be attempted choosing at least* ***ONE*** *question from each section.*

*The number of marks carried by a question / part is indicated against it.*

*Answers must be written in* ***KANNADA (Kannada script)****.*

*Word limit in questions, wherever specified, should be adhered to.*

*Attempts of questions shall be counted in sequential order. Unless struck off, attempt of a question shall be counted even if attempted partly. Any page or portion of the page left blank in the Question-cum-Answer Booklet must be clearly struck off.*

---

## SECTION A

**Q1.** **ಈ ಕೆಳಗಿನ ಪದ್ಯಗಳ ಸಂದರ್ಭವನ್ನು ಸೂಚಿಸಿ ಅವುಗಳ ಭಾವ ಮತ್ತು ಸ್ವಾರಸ್ಯವನ್ನು ಕುರಿತು ಬರೆಯಿರಿ. (ಪ್ರತಿಯೊಂದೂ 150 ಪದಗಳ ಉತ್ತರ ಮಿತಿಯಲ್ಲಿ)** *10×5=50*

(a) ಇದ ಚೊಳ್ ಶ್ವೇತಾತಪತ್ರಸ್ಥಗಿತ ದಶದಿಶಾಮಂಡಲಂ ರಾಜ ಚಕ್ರಂ ।
ಪುದಿದಟ್ಟೊಡಿತ್ತಡಂಗಿತ್ತಿದ ಚೊಳೆ ಕುರು ರಾಜಾನ್ವಯಂ ಮತ್ಪ್ರತಾಪ ।
ಕ್ಕಿದ ಚೆಂದಂ ನೋಡಗುರ್ವುರ್ವಿದುದಿದುವೆ ಮಹಾಭಾರತಕ್ಕಾದಿಯಾಯ್ತು ।
ಬ್ದದಳಾಕ್ಷೀ ಪೇಟಿ ಸಾಮಾನ್ಯಮೆ ಬಗೆಯೆ ಭವತ್ಕೇಶಪಾಶಪ್ರಪಂಚಂ ॥ *10*

(b) ನುಡಿದರೆ ಮುತ್ತಿನ ಹಾರದಂತಿರಬೇಕು,
ನುಡಿದರೆ ಮಾಣಿಕ್ಯದ ದೀಪ್ತಿಯಂತಿರಬೇಕು,
ನುಡಿದರ ಸ್ಫಟಿಕದ ಶಲಾಕೆಯಂತಿರಬೇಕು,
ನುಡಿಯೊಳಗಾಗಿ ನಡೆಯದಿದ್ದರೆ ಮೆಚ್ಚ ಕೂಡಲಸಂಗಮದೇವ ॥ *10*

(c) ದ್ಯುಮಣಿ ಕರ್ಣದ್ಯುಮಣಿ ಸಹಿತ
ಸ್ತಮಿಸೆ ಕಮಲಿನಿ ಕೌರವನ ಮುಖ
ಕಮಲ ಬಾಡಿತು ತಿಮಿರ ಹೆಚ್ಚಿತು ಶೋಕ ತಮದೊಡನೆ ।
ಅಮಳ ಚಿತ್ರಾಂಗಕ್ಕೆ ಭೂಪೋ
ತ್ತಮನ ವಿಜಯಾಂಗನೆಗೆ ಅಗಲಿಕೆ
ಸಮನಿಸಿತು ಕೇಳಯ್ಯ ಜನಮೇಜಯ ಮಹೀಪಾಲ ॥ *10*

(d) ಮಂಡೆ ಬೋಳು ಮಾಡಿ ನಾಮ
ದುಂಡೆಯನ್ನು ಬರೆದು ಕೆಡಿಸಿ
ಕಂಡ ಕಂಡವರನು ಕಾಡಿ
ಬಂಡ ಜನ್ಮ ಹೊರೆಯುವವಗೆ
ದಾಸ ಪಟ್ಟವೋ ಸಂನ್ಯಾಸ ಪಟ್ಟವೋ
ಆಸಯಿಂದ ನೆಲೆಯಾದಿ ಕೇಶವನ್ನು ನೆನೆಯದವಗೆ ॥ *10*

(e) ಸಕಲ ಲಕ್ಷಣವು ವಸ್ತುಕಕೆ, ವರ್ಣಕರಿಷ್ಟು
ವಿಕಳವಾದರು ದೋಷವಿಲ್ಲ
ಸಕಲ ಲಕ್ಷಣಕಾಗಿ ಬಿರುಸು ಮಾಡಿದರೆ ಪು
ಸ್ತಕದ ಬದನೆಕಾಯಹುದು *10*

**Q2.** (a) ವಡ್ಡಾರಾಧನೆಯ ಸುಕುಮಾರಸ್ವಾಮಿಯ ಕಥೆಯ ಸ್ವಾರಸ್ಯ ಮತ್ತು ಸಂದೇಶವನ್ನು ಕುರಿತು ಚರ್ಚಿಸಿರಿ. 20

(b) ಪಂಪನ ವಿಕ್ರಮಾರ್ಜುನ ವಿಜಯ ಕಾವ್ಯದ ಹಿನ್ನೆಲೆಯಲ್ಲಿ ಆಗಿನ ಜೀವನ ಮೌಲ್ಯಗಳ ಚಿತ್ರಕವನ್ನು ನಿರೂಪಿಸಿರಿ. 20

(c) ನಂಬಿಯಣ್ಣನ ಸಾಂಸಾರಿಕ ಮತ್ತು ಅಧ್ಯಾತ್ಮಿಕ ನೆಲೆಗಳನ್ನು ಹರಿಹರನು ಚಿತ್ರಿಸಿದ ಬಗೆಯನ್ನು ವಿವರಿಸಿ. 10

**Q3.** (a) ಕುಮಾರವ್ಯಾಸನ ರೂಪಕ ನಿರ್ಮಾಣ ಕೌಶಲದ ವೈಶಿಷ್ಟ್ಯವೇನು ? ವಿಶದಪಡಿಸಿರಿ. 20

(b) ಕನಕದಾಸರ ಕೀರ್ತನೆಗಳಲ್ಲಿ ಜಾತಿ ಭೇದದ ಕುರಿತಾದ ಜಿಜ್ಞಾಸೆಯು ಹೇಗೆ ಮಾಡಿಬಂದಿದೆ ? ಚರ್ಚಿಸಿ. 20

(c) ದುಶ್ಶಾಸನನ ಅಂತ್ಯದ ನಿರೂಪಣೆಯನ್ನು ಪಂಪನಲ್ಲಿ ಹೇಗೆ ಪರಿಭಾವಿಸಲಾಗಿದೆ ? ವಿವರಿಸಿರಿ. 10

**Q4.** (a) "ಭೋಗ ಮತ್ತು ಯೋಗಗಳ ಸಮನ್ವಯವು ರತ್ನಾಕರನ ಸಿದ್ಧಿಯಾಗಿದೆ" ಈ ಹೇಳಿಗೆಯನ್ನು ವಿಶದಪಡಿಸಿರಿ. 20

(b) "ಕರ್ಣ ಒಂದು ಅಭಿಶಪ್ತ ಪಾತ್ರ" ಎಂಬ ಉಕ್ತಿಯು ಕುಮಾರವ್ಯಾಸನ ಕಾವ್ಯದಲ್ಲಿ ನಿರೂಪಿತವಾದ ಬಗೆಯನ್ನು ವಿವರಿಸಿ. 20

(c) ಅಕ್ಕನ ವಚನಗಳ ಕಾವ್ಯಮೌಲ್ಯಗಳನ್ನು ಕುರಿತು ಚರ್ಚಿಸಿರಿ. 10

## SECTION B

**Q5.** ಈ ಕೆಳಗಿನವುಗಳನ್ನು ಕುರಿತು ಟಿಪ್ಪಣಿ ಬರೆಯಿರಿ.
(ಪ್ರತಿಯೊಂದೂ 150 ಪದಗಳ ಉತ್ತರ ಮಿತಿಯಲ್ಲಿ) *10×5=50*

(a) ಆಧುನಿಕ ಕನ್ನಡ ಸಣ್ಣಕಥೆಗಳ ಆರಂಭಕಾಲ. *10*

(b) ಗಾದೆಗಳು ಮತ್ತು ಒಗಟುಗಳ ತಾತ್ತ್ವಿಕ ನೆಲೆಗಳು. *10*

(c) 'ಶೂದ್ರತಪಸ್ವಿ' ನಾಟಕದ ವಸ್ತುವೈಶಿಷ್ಟ್ಯ. *10*

(d) ದೇವರ ವಿಚಾರದಲ್ಲಿ ಮೂರ್ತಿರಾಯರ ಚಿಂತನೆ. *10*

(e) 'ಧನಿಯರ ಸತ್ಯನಾರಾಯಣ' ಕಥೆಯ ಆಶಯ. *10*

**Q6.** (a) ಜನಪದ ಕಥೆಗಳ ಸ್ವರೂಪ ವಿವೇಚನೆಯನ್ನು ಪಠ್ಯದ ನೆಲೆಯಿಂದ ವಿವರಿಸಿ. *20*

(b) ತುಘಲಕನ ಕನಸುಗಳ ಬಗೆಗೆ, ನಾಟಕದ ಹಿನ್ನೆಲೆಯಲ್ಲಿ ಚರ್ಚಿಸಿರಿ. *20*

(c) 'ಬೀದಿ ಮಕ್ಕಳು ಬೆಳೆದೊ' ಎಂಬ ಉಕ್ತಿಯು ಹೇಗೆ ಸಾರ್ಥಕವೆನಿಸಿದೆ ? ವಿವರಿಸಿರಿ. *10*

**Q7.** (a) 'ಬೆಟ್ಟದ ಜೀವ' ಕಾದಂಬರಿಯ ಗೋಪಾಲಯ್ಯ ಪಾತ್ರವನ್ನು ಕುರಿತು ವಿವೇಚಿಸಿರಿ. *20*

(b) 'ಒಡಲಾಳ' ದ ಸಾಕವ್ವ ನಡೆಸುವ ಕಾಯಕದ ಮಹತ್ವದ ಕುರಿತು ಚರ್ಚಿಸಿರಿ. *20*

(c) 'ಜಾನಪದ ಸ್ವರೂಪ' ಕೃತಿಯ ಮಹತ್ವವನ್ನು ವಿವರಿಸಿರಿ. *10*

**Q8.** (a) ನವೋದಯ ಕಾವ್ಯದ ಮುಖ್ಯ ಆಶಯಗಳನ್ನು ಚರ್ಚಿಸಿರಿ. *20*

(b) ಬಂಡಾಯ ಸಾಹಿತ್ಯದ ಹುಟ್ಟು ಮತ್ತು ಬೆಳವಣಿಗೆಯ ಮಜಲುಗಳನ್ನು ವಿಶ್ಲೇಷಿಸಿರಿ. *20*

(c) "ಮಾಧವಿ ಒಂದು ಶೋಷಿತ ಪಾತ್ರ" ಈ ಹೇಳಿಗೆಯನ್ನು ವಿಶದಪಡಿಸಿರಿ. *10*